# ಕ.ರಾ.ರ.ಸಾ.ನಿಗಮ :: ಮೈಸೂರು ವಿಭಾಗ :: ಮೈಸೂರು

ಸಂ:ಕರಾಸಾ/ಮೈವಿ/ಸಂ/ವಾ/ 1034 /2023-24 ದಿನಾಂಕ:-28-06-2023

## ಇ-ಟೆಂಡರ್ ಪ್ರಕಟಣೆ ಸಂ: 01/2023-24

("ಇ" ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖೇನ)

ಕ.ರಾ.ರ.ಸಾ.ನಿಗಮ ಮೈಸೂರು ವಿಭಾಗಕ್ಕೆ ಸೇರಿದ ಈ ಕೆಳಗಿನ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ, ಮುಂದೆ ಖಾಲಿಯಾಗುವ ಮಳಿಗೆ/ ಕೊಠಡಿ/ತೆರೆದ ಸ್ಥಳಗಳನ್ನು ಹೇಗಿದೆಯೋ/ಎಲ್ಲಿದೆಯೋ ಹಾಗೆ ಸಾ.ಸ್ಥಾ.ಆದೇಶ ಸಂ:787 ರಂತೆ ಪರವಾನಗಿ ಮೇಲೆ ನೀಡಲು ಉದ್ದೇಶಿಸಲಾಗಿದೆ. "ಇ"-ಪ್ರೊಕ್ಯೂರ್‌ಮೆಂಟ್ ಸೆಲ್‌ನಿಂದ ಡಿ.ಎಸ್.ಸಿ (ಡಿಜಿಟಲ್ ಸಿಗ್ನೇಚರ್ ಸರ್ಟಿಫಿಕೇಟ್) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಪ್ರತಿ ವರ್ಷ ಲೈಸೆನ್ಸ್ ಶುಲ್ಕದ ಮೇಲೆ ಶೇ.10/-ರಷ್ಟು ಹೆಚ್ಚಳವಿರುತ್ತದೆ. ಶಾಶ್ವತ ಮಳಿಗೆ/ ಕೊಠಡಿಯನ್ನು 05 ವರ್ಷದ ಅವಧಿಗೆ ಹಾಗೂ ತೆರೆದ ಸ್ಥಳಕ್ಕೆ 03 ವರ್ಷದ ಅವಧಿಗೆ ಕರಾರು ಮಾಡಿಕೊಳ್ಳಲಾಗುವುದು. ಇಚ್ಛೆಯುಳ್ಳವರು ಸಂಬಂಧಿಸಿದ ಮಳಿಗೆಗಳ ಮುಂದೆ ಸೂಚಿಸಿರುವ ಇ.ಎಂ.ಡಿ. ಮೊತ್ತ ರೂ.500/-ನ್ನು ಇ'-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸುವುದು. ಉಳಿಕೆ ಇ.ಎಂ.ಡಿ ಹಾಗೂ ಅರ್ಜಿಶುಲ್ಕ/ಜಿ.ಎಸ್.ಟಿ ಶುಲ್ಕದ ಮೊತ್ತವನ್ನು ಡಿ.ಡಿ.ಮೂಲಕ, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ವಿಭಾಗ, ಮೈಸೂರುರವರಿಗೆ ಸಲ್ಲಿಸುವುದು.

ಇ-ಟೆಂಡರ್‌ನಲ್ಲಿ ದಿನಾಂಕ: 05-07-2023 ರಿಂದ ದಿ: 25-07-2023ರ 15.00 ಘಂಟೆಯವರೆಗೆ ಬಿಡ್ ಸಲ್ಲಿಸುವುದು. ದಿನಾಂಕ: 28-07-2023ರಂದು ಸಮಯ 15.00 ಗಂಟೆಗೆ ಇ-ಟೆಂಡರ್ ತೆರೆಯಲಾಗುವುದು. (ತಾಂತ್ರಿಕ ತೊಂದರೆಗಳು ಇಲ್ಲದಿದ್ದಲ್ಲಿ) ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಬಸ್ ನಿಲ್ದಾಣ ಹೆಸರು | ಖಾಲಿ ಇರುವ ವಾಣಿಜ್ಯ ಮಳಿಗೆ | ವಿಸ್ತೀರ್ಣ (ಚ.ಅಡಿ) | ಮಾಸಿಕ ಮಿತವ್ಯಯ ಶುಲ್ಕ ರೂ. | ಇ.ಎಂ.ಡಿ ಡಿ.ಡಿ .ಮುಖೇನ ಈ ಕಛೇರಿಗೆ ರೂ | ಇ.ಎಂ.ಡಿ 'ಇ' ಪೋರ್ಟಲ್ ಮುಖೇನ ರೂ | ಪರವಾನಗಿ ಅವಧಿ/ ವರ್ಷಗಳು & ಮೀಸಲಾತಿ | ಅರ್ಜಿಶುಲ್ಕ+ ಜಿ.ಎಸ್.ಟಿ ಡಿ.ಡಿ.ಮುಖೇನ ಈ ಕಛೇರಿಗೆ ಸಲ್ಲಿಸಬೇಕಾದ ಮೊತ್ತ. ರೂ |
|---|---|---|---|---|---|---|---|---|
| 1 | ಸಾತಗಳ್ಳಿ ಬಸ್ ನಿಲ್ದಾಣ | ವಾಣಿಜ್ಯ ಸ್ಥಳ-04 ಬಿ ಬ್ಲಾಕ್.2ನೇ ಮಹಡಿ(ಕಚೇರಿ/ ಶೈಕ್ಷಣಿಕ ಚಟುವಟಿಕೆಗಾಗಿ) | 22245.76 | 1,83,756. | 550768 | 500 | 10 ವರ್ಷ- ಸಾಮಾನ್ಯ | 1838+331= 2169 |
| 2 | ಸರಗೂರು ಬಸ್ ನಿಲ್ದಾಣ | ಜನರಲ್ ಮಳಿಗೆ-09 | 139.02 | 7986 | 23958 | 500 | 05/ಪ.ಜಾತಿ | 100+18=118 |
| 3 | ಹುಣಸೂರು ಹೊಸ ಬಸ್ ನಿಲ್ದಾಣ | ಉಪಹಾರ ಗೃಹ | 3821.95 | 48400 | 145200 | 500 | 05/ಸಾಮಾನ್ಯ | 484+87=571 |
| 4 | ಕೆ.ಆರ್.ನಗರ ಬಸ್ ನಿಲ್ದಾಣ | ಜನರಲ್ ಮಳಿಗೆ-02 ದಿ:05-12-23 ರಂದು ತೆರವುಗೊಳ್ಳುತ್ತದೆ | 194.71 | 13200 | 39100 | 500 | 05/ಸಾಮಾನ್ಯ | 132+24=156 |
| 5 | ಕೆ.ಆರ್.ನಗರ ಬಸ್ ನಿಲ್ದಾಣ | ಆಫೀಸ್ ಹಾಲ್-02ಮೊದಲನೇ ಅಂತಸ್ತು, ದಿ;31-10-23 ರಂದು ತೆರವುಗೊಳ್ಳುತ್ತದೆ | 1399 | 7611 | 22935 | 500 | 05/ಸಾಮಾನ್ಯ | 100+18=118 |
| 6 | ಹೆಚ್.ಡಿ.ಕೋಟೆ ಬಸ್ ನಿಲ್ದಾಣ | ಜನರಲ್ ಮಳಿಗೆ-01 ದಿ:25-09-23 ರಂದು ತೆರವುಗೊಳ್ಳುತ್ತದೆ | 144.78 | 15392 | 45676 | 500 | 05/ಸಾಮಾನ್ಯ | 153+28=181 |
| 7 | ಮೈಸೂರು ಕೇಂದ್ರೀಯ | ಜನರಲ್ ಮಳಿಗೆ-02 ಬಳಿಯುಳ ಅಂಗಡಿ ಪಕ್ಕದ | 111.15 | 74669 | 273507 | 500 | 05/ಸಾಮಾನ್ಯ | 747+134=881 |

ದಿನಾಂಕ: 05-07-2023 ರಿಂದ ದಿ: 25-07-2023 ಸಮಯ 15.00 ಗಂಟೆವರೆಗೆ ಇ-ಟೆಂಡರ್ ಮೂಲಕ ಅರ್ಜಿಯನ್ನು ಅಪ್-ಲೋಡ್ ಮಾಡಬಹುದಾಗಿದೆ. ಹರಾಜು/ಟೆಂಡರ್ ದಸ್ತಾವೇಜುಗಳನ್ನು "ಇ"-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ರ https://kppp.karnataka.gov.in ) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:- 25-07-2023 ಸಮಯ:-15.00 ಗಂಟೆವರೆಗೆ

ಟೆಂಡರ್ ತೆರೆಯುವ ದಿನಾಂಕ:- 28-07-2023 ಸಮಯ:-15:00 ಗಂಟೆಗೆ (ತಾಂತ್ರಿಕ ತೊಂದರೆಗಳು ಇಲ್ಲದಿದ್ದಲ್ಲಿ)

ಅರ್ಜಿದಾರರು ಅರ್ಜಿ ಶುಲ್ಕ, ಇ.ಎಂ.ಡಿ ಶುಲ್ಕದ ಮೂಲ ಡಿಡಿ ಗಳನ್ನು/ಇತರ ದಾಖಲಾತಿಗಳನ್ನು ವಿಭಾಗೀಯ ಕಛೇರಿಗೆ ಸಲ್ಲಿಸುವ ದಿನಾಂಕ ಮತ್ತು ಸಮಯ:-ದಿ: 05-07-2023 ಕಛೇರಿ ಅವಧಿಯಿಂದ ದಿ: 25-07-2023 17.00 ಗಂಟೆವರೆಗೆ

ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ ವಿಳಾಸ: ( https://kppp.karnataka.gov.in ) ನ್ನು ತೆರೆದು ನೋಡುವುದು. ಮಳಿಗೆಗಳ ಕುರಿತು ಹೆಚ್ಚಿನ ಮಾಹಿತಿಗೆ ವಿಷಯ ನಿರ್ವಾಹಕರ ದೂರವಾಣಿ ಸಂಖ್ಯೆ 9740661585/9343554555/7019026615 ನ್ನು ವಿಭಾಗೀಯ ನಿಯಂತ್ರಣಾಧಿಕಾರಿಯವರ ದೂರವಾಣಿ ಸಂಖ್ಯೆ.7760990802, ಸಹಾಯಕ ಸಂಚಾರ ವ್ಯವಸ್ಥಾಪಕರ ದೂರವಾಣಿ ಸಂಖ್ಯೆ.7760990811 ನ್ನು ಸಂಪರ್ಕಿಸಬಹುದಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ಮೈಸೂರು ವಿಭಾಗ, ಮೈಸೂರು

ಸೂಚನೆಗಳು:-

1)ಮಳಿಗೆ/ಜಾಹೀರಾತುಗಳಿಗೆ ಪಾವತಿಸುವ ಇಎಂಡಿ ಮೊತ್ತಗಳನ್ನು ಡಿ.ಡಿ ಮುಖೇನ ಈ ಕಛೇರಿಗೆ ಪಾವತಿಸುವುದು ರೂ 500/-ನ್ನು ಮಾತ್ರ 'ಇ'-ಪೋರ್ಟಲ್‌ನಲ್ಲಿ ಪಾವತಿಸುವುದು. ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ.10/- ರಷ್ಟು ಹೆಚ್ಚಾಗುವುದು. ಮಳಿಗೆಗಳನ್ನು ಉಪಯೋಗಿಸುವ ಉದ್ದೇಶವನ್ನು ಟೆಂಡರ್ ಅರ್ಜಿಯಲ್ಲಿ ನಮೂದಿಸಬೇಕು. ಯಾವುದೇ ಕಾರಣಕ್ಕೂ ಟೆಂಡರ್ ಅರ್ಜಿಯಲ್ಲಿ ಸೂಚಿಸಿರುವ ವ್ಯಾಪಾರವನ್ನು ನಡೆಸಲು ಮಾತ್ರ ಅವಕಾಶವಿರುತ್ತದೆ. (ಜನರಲ್ ಮಳಿಗೆಗಳಲ್ಲಿ ಒಲೆಯನ್ನು ಹಚ್ಚಲು ಅವಕಾಶ ಇರುವುದಿಲ್ಲ. ಹಾಗೂ ಉಪಹಾರಗೃಹ/ದರ್ಶಿನಿಗಳಿಗೆ ಅವಕಾಶ ನೀಡಲಾಗುವುದಿಲ್ಲ. ಜನರಲ್ ಮಳಿಗೆಗಳಲ್ಲಿ ಕಾನೂನು ಬಾಹಿರ/ನಿಷೇಧಿಸಿರುವ ವ್ಯವಹಾರವನ್ನು ನಡೆಸಲು ಸಹ ಅವಕಾಶವಿರುವುದಿಲ್ಲ) ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ ಪದಾರ್ಥ ಸಾಮಾಗ್ರಿ, ನೀರಿನ ಬಾಟಲ್ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ದಿಷ್ಟಪಡಿಸಿದ ಎಂ.ಆರ್.ಪಿ ಬೆಲೆಗೆ ಮಾರಾಟ ಮಾಡುವುದು.ಹರಾಜು/ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟ್ಯಾಂಪ್ ಆಕ್ಟ್ 1957 ಸೆಕ್ಷನ್ 32ಎ (ಎ)(iii)ರಲ್ಲಿ ಪರಿಷ್ಕೃತ ಸ್ಟ್ಯಾಂಪ್ ಆಕ್ಟ್ ನಂ:8/2003 ರನ್ವಯ ಸ್ಟ್ಯಾಂಪ್ ಶುಲ್ಕವನ್ನು ಭರಿಸಿ ಆಯ್ಕೆಗೊಂಡ 03 ದಿನದೊಳಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿರುತ್ತದೆ.

ಭದ್ರತಾ ಠೇವಣಿ ವಿವರ ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ | ಪರವಾನಗಿ ಅವಧಿ | ಪಾವತಿಸಬೇಕಿರುವ ಭದ್ರತಾ ಠೇವಣಿ |
|---|---|---|
| 1 | 3 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 6 ಪಟ್ಟು |
| 2 | 5 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |
| 3 | 10 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 10 ಪಟ್ಟು |

(2) ಆಯ್ಕೆ ಆದ ಪರವಾನಿಗೆದಾರರು ತಾವು ಸಲ್ಲಿಸಿರುವ ಇಎಂಡಿ ಹಣವನ್ನು ಭದ್ರತಾ ಠೇವಣಿಗೆ ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ ಪರವಾನಿಗೆ ಶುಲ್ಕದ ಆರು/ಎಂಟು/ಹತ್ತು (06)(08)(10) ರಷ್ಟು ಹಣವನ್ನು ಭದ್ರತಾ ಠೇವಣಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ ನಂತರ ಡಿ.ಡಿ. ರೂಪದಲ್ಲಿ "ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ಮೈಸೂರು ಗ್ರಾಮಾಂತರ ವಿಭಾಗ, ಮೈಸೂರು" ಇವರ ಹೆಸರಿನಲ್ಲಿ ಪಾವತಿಸುವುದು.ಆಯ್ಕೆಗೊಂಡ ಪರವಾನಗಿದಾರರು ಸಕಾಲದಲ್ಲಿ ಕಛೇರಿಗೆ ಒಳಗಾಗದಿದ್ದಲ್ಲಿ ಅಂತಹ ಬಿಡ್ಡುದಾರರ ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

(3) ಆಯ್ಕೆಗೊಂಡ ಪರವಾನಿಗೆದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಶೇ.18 (ಸರ್ಕಾರಿ ನಿಯಮದಂತೆ ಬದಲಾವಣೆಗೆ ಒಳಪಟ್ಟಿದೆ) ರಷ್ಟು ಸೇವಾತೆರಿಗೆ/ಜಿ.ಎಸ್.ಟಿಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.

(4) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್/ನಿಬಂಧನೆಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.

(5) ಸಂಸ್ಥೆಯ ಮಾಸಿಕ ಪರವಾನಿಗೆ ಶುಲ್ಕ ಬಾಕಿಯುಳಿಸಿಕೊಂಡಿರುವವರು/ಕಪ್ಪುಪಟ್ಟಿಗೆ ಸೇರಿರುವವರು, ಇ"-ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ.

(6) ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

(7) ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವುದು.

(8) ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಸಂಬಂಧಪಟ್ಟ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.

(9) ಆಯ್ಕೆಗೊಂಡ ಪರವಾನಿಗೆದಾರರು ಮಳಿಗೆಯನ್ನು ಸ್ವತಃ ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.

(10) ಆಯ್ಕೆಗೊಂಡ ಪರವಾನಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.